ನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈ ಪೈಕಿ ಕೆಲವೊಂದು ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಮಂಡಳಿಯ ನೌಕರರ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತಿದ್ದು, ಅಂತಿಮಗೊಳಿಸಿದ ಕೂಡಲೇ ಭರ್ತಿ ಮಾಡಲಾಗುವುದು.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಜನತೆಯ ಅಭಿವೃದ್ಧಿ

4811 - ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ರಾಜ್ಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ನಿಗಮದಿಂದ ಸದರಿ ಜನಾಂಗದ ಸರ್ವೋತ್ತಮ ಅಭಿವೃದ್ಧಿಗೆ ಕಳೆದ ಒಂದು ವರ್ಷದಿಂದ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು ಮೀಸಲಿಡಲಾಗಿದೆ. ಹಾಗೂ ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು ? (ಯೋಜನಾವಾರು ವಿವರ ನೀಡುವುದು ?)*

ಆ) *ರಾಜ್ಯದ ಹಿಂದುಳಿದ ವರ್ಗ ಅಲ್ಪಸಂಖ್ಯಾತರ ನಿಗಮದಿಂದ ಅಭಿವೃದ್ಧಿಗಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ?*

ಇ) *ಇವರುಗಳ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಮೀಸಲಾಗಿಡಲಾಗಿದೆ ಹಾಗೂ ಬಿಡುಗಡೆ ಮಾಡಿದ ಹಣವೆಷ್ಟು ?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿದೆ :

1) ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್ ಯೋಜನೆ
2) ವಾಹನ ಚಾಲನಾ ತರಬೇತಿ ಕಾರ್ಯಕ್ರಮ
3) ಡಿಪ್ಲೊಮಾ ಮತ್ತು ಪೋಸ್ಟ್ ಡಿಪ್ಲೊಮೊ ತರಬೇತಿ ಕಾರ್ಯಕ್ರಮ.
4) ವೃತ್ತಿಪರ ತರಬೇತಿ ಕಾರ್ಯಕ್ರಮ
5) ಗಂಗಾ ಕಲ್ಯಾಣ ನೀರಾವರಿ ಯೋಜನೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ :

1) ಸ್ವಾವಲಂಬನ ಸಾಲದ ಯೋಜನೆ

2) ವಾಹನ ಚಾಲನಾ ತರಬೇತಿ ಯೋಜನೆ

3) ವೃತ್ತಿಪರ ತರಬೇತಿ ಯೋಜನೆ

4) ಫೋರ್‌ಮನ್‌ಶಿಪ್ ತರಬೇತಿ ಯೋಜನೆ

5) ಗಂಗಾ ಕಲ್ಯಾಣ ಯೋಜನೆ

ಇ) 1999-2000ನೇ ಸಾಲಿಗೆ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ರೂ.1523.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ರೂ.1123.10 ಲಕ್ಷಗಳನ್ನು ಸರ್ಕಾರವು ಬಿಡುಗಡೆ ಮಾಡಿದೆ.

1999-2000ನೇ ಸಾಲಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ರೂ. 708.63 ಲಕ್ಷಗಳನ್ನು ಮೀಸಲಿಡಲಾಗಿದ್ದು ಹಾಗೂ ರೂ. 562.00 ಲಕ್ಷಗಳನ್ನು ನಿಗಮಕ್ಕೆ ಸರ್ಕಾರವು ಬಿಡುಗಡೆ ಮಾಡಿದೆ.

ಅನುಬಂಧ - 1

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ನಿಗಮದ ವಿವಿಧ ಯೋಜನೆಗಳಡಿ 1999-2000ನೇ ಸಾಲಿನಲ್ಲಿ ಮೀಸಲಿಟ್ಟ ಹಾಗೂ ಬಿಡುಗಡೆ ಮಾಡಿದ ಹಣದ ವಿವರ

(ರೂ. ಲಕ್ಷಗಳಲ್ಲಿ)

ಕ್ರಮ. ಸಂಖ್ಯೆ	ಯೋಜನೆ	ಒದಗಿಸಿರುವ ಹಣ	ಬಿಡುಗಡೆಯಾದ ಹಣ
01	ಗಂಗಾ ಕಲ್ಯಾಣ ಯೋಜನೆ	665.00	798.50 *
02	ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ	-	-
03	ಭೂ ಒಡೆತನ ಯೋಜನೆ	400.00	300.00
04	ಸ್ವಯಂ ಉದ್ಯೋಗ ಯೋಜನೆ (ರೂ. 50,000-00ಕ್ಕಿಂತ ಒಳಪಟ್ಟು)	740.00	555.50
05	ಐ.ಎಸ್.ಬಿ. ಯೋಜನೆ	-	-
06	ಎನ್.ಎಸ್.ಎಫ್.ಡಿ.ಸಿ. ನೇರ ಸಾಲ ಯೋಜನೆ	-	1364.06

ಕ್ರಮ. ಸಂಖ್ಯೆ	ಯೋಜನೆ	ಒದಗಿಸಿರುವ ಹಣ	ಬಿಡುಗಡೆಯಾದ ಹಣ
07	ಸಹಾಯಿ ಕರ್ಮಚಾರಿ ಪುನರ್ವಸತಿ ಯೋಜನೆ	-	-
08	ದೇವದಾಸಿ ಪುನರ್ವಸತಿ ಯೋಜನೆ	28.00	21.00
09	ಪಂಪ್‌ಸೆಟ್ ಯೋಜನೆ	-	-
10	ಕೊರಗ ಮತ್ತು ಜೇನು ಕುರುಬ ಅಭಿವೃದ್ಧಿ ಯೋಜನೆ	-	-
	ಒಟ್ಟು (1)	**1833.00**	**3039.06**
01	ಷೇರು ಬಂಡವಾಳ (2)	1000.00	520.50
	ಒಟ್ಟು (1) ಮತ್ತು (2)	**2833.00**	**3559.56**

ಸೂಚನೆ : * ಬಿಡುಗಡೆಯಾದ ಹಣದಲ್ಲಿ ರೂ. 300.00 ಲಕ್ಷ ಕೇಂದ್ರೀಯ ಸಹಾಯಧನ ಮತ್ತು ರೂ. 1364.06 ಲಕ್ಷ ಎನ್.ಎಸ್.ಎಫ್.ಡಿ.ಸಿ. ಅವಧಿ ಸಾಲ ಸೇರಿರುತ್ತದೆ.

ಅನುಬಂಧ - 2

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ನಿಗಮದ ವಿವಿಧ ಯೋಜನೆಗಳಡಿ 2000-2001ನೇ ಸಾಲಿನಲ್ಲಿ ಮೀಸಲಿಟ್ಟ ಹಣ ಹಾಗೂ ಬಿಡುಗಡೆಯಾದ ಹಣದ ವಿವರ

(ರೂ. ಲಕ್ಷಗಳಲ್ಲಿ)

ಕ್ರಮ. ಸಂಖ್ಯೆ	ಯೋಜನೆ	ಒದಗಿಸಿರುವ ಹಣ	ಬಿಡುಗಡೆಯಾದ ಹಣ
01	ಗಂಗಾ ಕಲ್ಯಾಣ ಯೋಜನೆ	665.00	566.00 *
02	ಸ್ವಯಂ ಉದ್ಯೋಗ ಯೋಜನೆ (ರೂ. 50,000-00 ಕ್ಕಿಂತ ಒಳಪಟ್ಟು)	740.00	296.00
03	ಭೂ ಒಡೆತನ ಯೋಜನೆ	400.00	160.00
04	ದೇವದಾಸಿ ಪುನರ್ವಸತಿ ಯೋಜನೆ	28.00	11.20
05	ಷೇರು ಬಂಡವಾಳ	1020.00	530.00

ಕ್ರಮ. ಸಂಖ್ಯೆ	ಯೋಜನೆ	ಒದಗಿಸಿರುವ ಹಣ	ಬಿಡುಗಡೆಯಾದ ಹಣ
06	ಉಚಿತ ಪಂಪ್‌ಸೆಟ್ ಯೋಜನೆ	-	150.00 *
07	**ದೇವದಾಸಿ ಮಹಿಳೆಯರಿಗೆ :**		
	ಅ) ಗಂಗಾ ಕಲ್ಯಾಣ ಯೋಜನೆ ಮತ್ತು ವೈಯಕ್ತಿಕ ನೀರಾವರಿ ಯೋಜನೆಯಡಿ ಸೌಲಭ್ಯ	-	100.00 *
	ಆ) ಗಡಿ ಪ್ರದೇಶದ ನಕ್ಸಲೈಟ್‌ಗೆ ನಿಗಮದಿಂದ ಸೌಲಭ್ಯ ಒದಗಿಸಲು	-	100.00 *
	ಇ) ತರಬೇತಿ		9.00 *
	ಒಟ್ಟು	**2853.00**	**1922.20**

ಸೂಚನೆ : * ಬಿಡುಗಡೆಯಾದ ಹಣದಲ್ಲಿ ಕೇಂದ್ರೀಯ ಸಹಾಯಧನ ರೂ. 359.00 ಲಕ್ಷ ಮತ್ತು ಕ್ರೋಢಿಕೃತ ಹಣ ರೂ. 300.00 ಲಕ್ಷ ಸೇರಿರುತ್ತದೆ.

ಹೊನ್ನಾವರದ ಬಳಿ ಅನಧಿಕೃತ ಗಣಿಗಾರಿಕೆ ನಡೆಯುತ್ತಿರುವುದರ ಬಗ್ಗೆ

4812 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ಬಳಿ ಅನಧಿಕೃತ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅನಧಿಕೃತ ಗಣಿಗಾರಿಕೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಅಕ್ರಮ ಗಣಿಗಾರಿಕೆ ನಡೆಸುತ್ತಿರುವವರು ಯಾರು? (ಪೂರ್ಣ ವಿವರ ನೀಡುವುದು)

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಬಂದಿದೆ.

ಆ) ಹೊನ್ನಾವರ ತಾಲ್ಲೂಕಿನಲ್ಲಿ ಕೆಲವು ಕಡೆ ಮರಳು ಹಾಗೂ ಚಿಪ್ಪಿ (ಲೈಮ್ ಶೆಲ್)ಗಳಿಗಾಗಿ ಆಗಾಗ್ಗೆ ಅಕ್ರಮ ಗಣಿಗಾರಿಕೆ ನೆಡೆದಿದ್ದು ಇದನ್ನು ತಡೆಹಿಡಿದು ಏಪ್ರಿಲ್ 2000 ದಿಂದ ಇಲ್ಲಿಯವರೆಗೆ ಒಟ್ಟು 12 ಪ್ರಕರಣಗಳಲ್ಲಿ ರೂ. 62,000.00ಗಳ ದಂಡ ವಸೂಲು ಮಾಡಲಾಗಿದೆ.

ಇ) ವಿವರ ಲಗತ್ತಿಸಿದೆ.